ಇದ್ದಾಗಲೂ ಯಾವುದೇ ರೀತಿಯ ಜನಪರ ಕೆಲಸವನ್ನು ತಗದುಕೊಳ್ಳದಿರುವ ಸರ್ಕಾರವಾಗಿದೆ.

ಶ್ರೀ ಎ.ರಾಮದಾಸ್: ಇದು ರೈತರ ಪರ ಸರ್ಕಾರವೋ, ರೈತರ ವಿರೋಧಿ ಸರ್ಕಾರವೋ ಎಂಬುದನ್ನು ತೋರಿಸಬೇಕಾಗಿದೆ.

(ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರವೆಂದು ಕೂಗುತ್ತಾ ಭಾರತೀಯ ಜನತಾ ಪಕ್ಷದ ಸದಸ್ಯರು ಬಾವಿಯ ಬಳಿಗೆ ಧರಣಿ ಮಾಡಲು ಬಂದರು)

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರಿ ಸಚಿವರು ಸುಳ್ಳು ಹೇಳುತ್ತಿದ್ದಾರೆ.

ಅಧ್ಯಕ್ಷರು: ತಾವು ದಯಮಾಡಿ ಕುಳಿತುಕೊಳ್ಳಿ. ಕ್ವಾರಿಫೀಕೇಷನ್ ಕೇಳಿ ಎಂದರೆ ಚರ್ಚೆ ಮಾಡುತ್ತಾ ಹೋದರೆ ಹೇಗೆ? ತಾವು ದಯಮಾಡಿ ಕ್ಷಮಿಸಬೇಕು. ನಾನು ತಮ್ಮನ್ನು ಅರ್ಥಮಾಡಿಕೊಳ್ಳಲು ಆಗುತ್ತಿಲ್ಲ. ಮಾಜಿ ಸಚಿವರಿದ್ದೀರಿ, ಬುದ್ಧಿವಂತರಾಗಿದ್ದೀರಿ ಕ್ವಾರಿಫೀಕೇಷನ್ ಕೇಳುವುದನ್ನು ಬಿಟ್ಟು ಮತ್ತೆ ಭಾಷಣ ಮಾಡುತ್ತಾ ಕುಳಿತರೆ ಹೇಗೆ? 252 ಕೋಟಿ ರೂಪಾಯಿ ಪಿ.ಎಲ್.ಡಿ. ಬ್ಯಾಂಕಿನ ಬಡ್ಡಿ ಮನ್ನಾ ಆಗುತ್ತದೆಂದು ಹೇಳಿದ್ದಾರಲ್ಲಾ.

ಶ್ರೀ ಎಸ್.ಎಸ್.ಪಾಟೀಲ್: ಅವರು ಸುಳ್ಳು ಹೇಳುತ್ತಿದ್ದಾರೆ. ಬೇಕಾದರೆ ಇದರ ಬಗ್ಗೆ ಪರಿಶೀಲನೆ ಮಾಡಲು ಸದನದ ಸಮಿತಿ ಮಾಡಿ. ಅವರೇ ಹೇಳಿರುವಂತೆ, ದಂಡದ ಬಡ್ಡಿ ಮನ್ನಾ 4 ಕೋಟಿ 60 ಲಕ್ಷ ರೂ.ಗಳು ಸಹಕಾರಿ ಮೂವ್‌ಮೆಂಟ್‌ನಲ್ಲಿ ಚಕ್ರಬಡ್ಡಿಯನ್ನು ಹಾಕುವಂತೆಯೇ ಇಲ್ಲ. ಆದರೆ ಸಚಿವರು ಚಕ್ರಬಡ್ಡಿಯೆಂದು ಹೇಳುತ್ತಾರೆ, ಇದಕ್ಕೆ ಒಪ್ಪಿಗೆ ನೀಡಬೇಕೇ? ಅಲ್ಲಿ ಚಕ್ರಬಡ್ಡಿ ಇಲ್ಲವೆ ಇಲ್ಲ, ಒಂದು ವೇಳೆ ಹಾಕಿದ್ದರೆ ಬ್ಯಾಂಕ್‌ನವರದ್ದು ತಪ್ಪು. ಹಾಕಲು ಬರುವುದಿಲ್ಲ. 252 ಕೋಟಿ ರೂ.ಎಂದು ಹೇಳುತ್ತಾರಲ್ಲಾ ಅದು ಎಲ್ಲಿಂದ ಬಂತು? ಸಾದಾ ಬಡ್ಡಿ 14.50 ಕೋಟಿ ರೂ.ಕೊಟ್ಟು ದಂಡದ ಬಡ್ಡಿ ಎರಡೂವರೆ ಪರ್‌ಸೆಂಟ್ ಇದೆ, ಅದನ್ನು ಕೊಟ್ಟು 252 ಕೋಟಿ ರೂಪಾಯಿಗಳೆಂದು ಮಂತ್ರಿಗಳು ತಪ್ಪು ಮಾಹಿತಿ ನೀಡಿದ್ದಾರೆ, ಬೇಕಾದರೆ ಸದನದ ಸಮಿತಿ ಮಾಡಿ, ಅವರು ಸುಳ್ಳು ಹೇಳಿದ್ದಾರೆಂದು ನಾನು ಸಾಬೀತು ಮಾಡುತ್ತೇನೆ. ಸರ್ಕಾರ ಸುಮ್ಮನೆ ನೆಪವನ್ನೇಳಿ ರೈತರ ಮೇಲೆ ಬಡ್ಡಿ ಮನ್ನಾ ಮಾಡಬಾರದೆಂದು ರೈತ ವಿರೋಧಿ ಸರ್ಕಾರವಿರುವುದರಿಂದ ಈ ಸರ್ಕಾರ ನಿಜವಾಗಿಯೂ ರೈತರ ವಿರೋಧಿ ಸರ್ಕಾರವಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಈ